ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ.

ಅಸಲು ದಾವಾ ಸಂಖ್ಯೆ ಃ **19/2020**

ಸಾಕ್ಷಿದಾರರ ಹೆಸರು ಃ ಶ್ರೀಮತಿ. ತನುಜ ಟಿ

ಗಂಡನ ಹೆಸರು ಃ ಮಂಜುನಾಥ್

ಪಿ.ಡಬ್ಲ್ಯೂ- **3**

ವಯಸ್ಸು ಃ **54** ವರ್ಷ

ಉದ್ಯೋಗ ಃ ತಹಶೀಲ್ದಾರ್

ವಾಸಸ್ಥಳ ಃ ನ ರಾ ಪುರ

ದಿನಾಂಕಃ **17.08.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ.ಹೆಚ್ ಎ ಎಸ್ ವಕೀಲರಿಂದ ಃಃ

ನಾನು 2023 ರಿಂದ ಈವರೆಗೆ ನಾನು ನ ರಾ ಪುರ ತಾಲ್ಲೂಕಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಾವಾ ಆಸ್ತಿಯ ಮೂಲ ದಾಖಲೆಗಳು ನಮ್ಮ ಕಚೇರಿಯಲ್ಲಿದೆ. ನಿಪಿ-17 ಕ್ಕೆ ಸಂಬಂಧಿಸಿ ಖಾಯಂ ಸಾಗುವಳಿ ಚೀಟಿ ನಮ್ಮ ಕಚೇರಿಯಲ್ಲಿರುತ್ತದೆ. ಸದರಿ ಮೂಲ ದಾಖಲೆ ಪ್ರಕಾರ ದಾವಾ ಆಸ್ತಿಯು ಮೊದಲಿಗೆ ಆರ್ ಪಿಂಟೋ ಬಿನ್ ಸಿ ಪಿಂಟೋ ರವರಿಗೆ ಮಂಜೂರು ಆಗಿದ್ದು, ನಂತರ ಅವರು ತೀರಿಕೊಂಡ ನಂತರ ವಿಲ್ ಪ್ರಕಾರ ಅವರ ತಾಯಿ ಹೆಸರು ಜೂಲಿಯಾನ ಫ್ಲೋರಿನಾ ಪಿಂಟೋ ಕೋಂ ಸಿ ಪಿಂಟೋ ರವರ ಹೆಸರಿಗೆ ಮಂಜೂರಾಗಿರುತ್ತದೆ.

ಮೂಲ ಮಂಜೂರಾತಿಯಾಗುವ ಮೊದಲು ಎ ಸಿ ಮತ್ತು ಡಿ ಸಿ ರವರು ಮಾಡಿರುವ ಆದೇಶ ಮತ್ತು ನಡಾವಳಿಗಳು ನಮ್ಮ ಕಚೇರಿಯಲ್ಲಿರುತ್ತವೆ. ಸದರಿ ಎ ಸಿ ಮತ್ತು ಡಿ ಸಿ ಕಚೇರಿಗಳಲ್ಲಿ ಖಾಯಂ ಸಾಗುವಳಿ ಚೀಟಿ ಅರ್ಜಿದಾರರಾದ ಜೂಲಿಯಾನ ಫ್ಲೋರಿನಾ ಪಿಂಟೋ ಕೋಂ ಸಿ ಪಿಂಟೋ ರವರ ಹೆಸರಿಗೆ ನೀಡಬಹುದು ಎಂದು ಆದೇಶವಾಗಿರುತ್ತದೆ.

ಸದರಿ ದಾವಾ ಆಸ್ತಿಯು ಕಂದಾಯ ಜಮೀನಾಗಿರುತ್ತದೆ. ಮಂಜೂರಾತಿ ಮಾಡುವ ಮೊದಲು ಎ ಸಿ ಯವರು ದಾವಾ ಆಸ್ತಿಯ ಸ್ಥಳ ಪರಿಶೀಲನೆ ಮಾಡಿ ದಾವಾ ಜಮೀನು ಅರಣ್ಯ ಪ್ರದೇಶವಾಗಿರುವುದಿಲ್ಲ ಕಂದಾಯ ಇಲಾಖೆಗೆ ಸೇರಿರುತ್ತದೆ ಎಂದು ಮರಮಲಿಕೆ ನಿಗದಿ ಮಾಡಿರುತ್ತಾರೆಂದರೆ ಸರಿ. ಸದರಿ ಪ್ರಕಾರ ಮರಮಲಿಕೆ ನಿಗದಿತ ಶುಲ್ಕ ರೂ. 5918/- ನ್ನು ವಾದಿಯು ಪಾವತಿ ಮಾಡಿರುತ್ತಾರೆಂದರೆ ಸರಿ. ಸದರಿ ದಾವಾ ಆಸ್ತಿಗೆ ಕಿಮ್ಮತ್ತನ್ನು ಕಟ್ಟಿಸಿಕೊಂಡಿರುತ್ತಾರೆಂದರೆ ಸರಿ. ನಿಪಿ-17 ಮೂಲ ಮಂಜೂರಾತಿ ಪತ್ರ ನಮ್ಮ ಕಡತದಲ್ಲಿರುತ್ತದೆ.

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ ಮಾನ್ಯ ಎ ಜಿ ಪಿ ಯವರಿಂದಃಃ</u>
ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ದಿನಾಂಕಃ 17.08.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ